ದಿನಾಂಕ ಃ 15.10.2024
ಅಸಲು ದಾವೆ: 71/2017
ಪಿ.ಡಬ್ಲ್ಯೂ: 4

<u>ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.</u>

**<u>ಮುಂದುವರೆದ ಪಾಟೀ ಸವಾಲು ಃ 7 ನೇ ಪ್ರತಿವಾದಿ ಪರ ವಕೀಲರಾದ ಶ್ರೀ ಕೆ.ಬಿ.ಎನ್. ರವರಿಂದಃ</u>**

ರಾಜಶೇಖರ ಮತ್ತು ನಾರಾಯಣ್ ವಾಸವಾಗಿದ್ದ ಹೆಂಚಿನ ಮನೆಯ ಖಾತಾ ನಂಬರ್ ನನಗೆ ಗೊತ್ತಿಲ್ಲ. ಅವರು ವಾಸವಾಗಿರುವ ಹೆಂಚಿನ ಮನೆಯ ದಾಖಲಾತಿಗಳನ್ನು ನಾನು ನ್ಯಾಯಾಲಯಕ್ಕೆ ಕೊಟ್ಟಿದ್ದೇನೆ. ನಾಗರಾಜುರವರು ಸಹಾ ಅದೇ ಹೆಂಚಿನ ಮನೆಯಲ್ಲಿ ಬೇರೆಯಾಗಿ ವಾಸವಿದ್ದಾರೆ. ಸದರಿ ಮನೆಯ ಖಾತೆ ನಾರಾಯಣ ಮತ್ತು ರಾಜಶೇಖರ್ ರವರ ಹೆಸರಿಗೆ ನಮಗೆ ಗೊತ್ತಿಲ್ಲದಂತೆ ಮಾಡಿಸಿಕೊಂಡಿದ್ದಾರೆ. ಈ ಕೇಸ್ ಹಾಕುವ ಮೊದಲು ನಾರಾಯಣ ಎಲ್ಲೆಲ್ಲಿ ಸಾಲ ಮಾಡಿದ್ದಾರೆ ಎಂದು ತಿಳಿದುಕೊಂಡಿದ್ದೀರಾ ಎಂದರೆ ಸಾಕ್ಷಿ ಇಲ್ಲ ಎಂದು ಉತ್ತರಿಸುತ್ತಾರೆ. ನೀವು ಆರ್.ಟಿ.ಸಿ ತೆಗೆಸಿ ನೋಡಿದಾಗ ಅದರಲ್ಲಿ ಸಾಲ ಮಾಡಿರುವ ಬಗ್ಗೆ ನಮೂದು ಇದೆಯಾ ಎಂದರೆ ಸಾಕ್ಷಿ 7 ನೇ ಪ್ರತಿವಾದಿಗೆ ಅಗ್ರಿಮೆಂಟ್ ಮಾಡಿಕೊಟ್ಟ ಬಗ್ಗೆ ಇದೆ ಎಂದು ಉತ್ತರಿಸುತ್ತಾರೆ. ನಾರಾಯಣರವರ ಹೆಸರಿನಲ್ಲಿ ಎಷ್ಟು ಆರ್.ಟಿ.ಸಿ.ಗಳು ಇವೆ ಎಂದರೆ ಸಾಕ್ಷಿ ಅದು ನನಗೆ ಗೊತ್ತಿಲ್ಲ ಎಂದು ಉತ್ತರಿಸುತ್ತಾರೆ. ರಾಜಶೇಖರರವರ ಹೆಸರಿನಲ್ಲಿ ಎಷ್ಟು ಆರ್.ಟಿ.ಸಿ.ಗಳು ಇವೆ ಎಂದರೆ ಸಾಕ್ಷಿ ಅದು ನನಗೆ ಗೊತ್ತಿಲ್ಲ ಎಂದು ಉತ್ತರಿಸುತ್ತಾರೆ. ಅದೇ ರೀತಿ ನಾಗರಾಜುರವರ ಹೆಸರಿನಲ್ಲಿ ಎಷ್ಟು ಆರ್.ಟಿ.ಸಿ.ಗಳು ಇವೆ ಎಂದರೆ ಸಾಕ್ಷಿ ಅದು ನನಗೆ ಗೊತ್ತಿಲ್ಲ ಎಂದು ಉತ್ತರಿಸುತ್ತಾರೆ. ನಾನು ಹಾಜರುಪಡಿಸಿರುವ ದಾಖಲಾತಿಗಳನ್ನು ನಾನೇ ಪಡೆದು ಹಾಜರು ಪಡಿಸಿರುತ್ತೇನೆ. ಆಗ ನಾರಾಯಣ ಎಲ್ಲಿ ಸಾಲ ಮಾಡಿದ್ದಾನೆ ಎಂಬುದು ಏನಾದರೂ ಗೊತ್ತಾಯಿತಾ ಎಂದರೆ ಸಾಕ್ಷಿ ಬಲ್ಲೇಗೌಡರ ಹತ್ತಿರ ಸಾಲ ಮಾಡಿದ್ದಾನೆ ಎಂಬುದು ಗೊತ್ತಾಯಿತು ಎಂದು ಉತ್ತರಿಸುತ್ತಾರೆ. ನಿಪಿ.4 ಜಮೀನನ್ನು ನಾರಾಯಣ ಎಸ್.ಬಿ.ಐ ಬ್ಯಾಂಕಿಗೆ ಆಧಾರ ಮಾಡಿ ರೂ.4,95,000/- ಗಳನ್ನು ಸಾಲ ಮಾಡಿದ್ದಾರೆ ಎಂದರೆ ಸಾಕ್ಷಿ ಅದು ನನಗೆ ಗೊತ್ತಿಲ್ಲ ಎಂದು ಉತ್ತರಿಸುತ್ತಾರೆ. ನಿಪಿ.4 ರಲ್ಲಿ ಬ್ಯಾಂಕಿನಲ್ಲಿ ಸಾಲ ಮಾಡಿರುವ ಬಗ್ಗೆ ನಮೂದಿದೆ ಎಂದರೆ ಸಾಕ್ಷಿ ಅದು ನನಗೆ ಇತ್ತೀಚೆಗೆ ಗೊತ್ತಾಯಿತು ಎಂದು ಉತ್ತರಿಸುತ್ತಾರೆ.

ರಾಜಶೇಖರ ಗೆಜ್ಜಲಗೆರೆ ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘದಲ್ಲಿ ಸಾಲ ಪಡೆದುಕೊಂಡಿದ್ದಾರೆ ಎಂದರೆ ನನಗೆ ಗೊತ್ತಿಲ್ಲ. ನಾನು ಆರ್.ಟಿ.ಸಿ. ತೆಗೆದುಕೊಂಡ ನಂತರ ರಾಜಶೇಖರ್ ರವರು ಮೇಲೆ ಹೇಳಿದ ಸಹಕಾರಿ ಸಂಘದಲ್ಲಿ ಸಾಲ ತೆಗೆದುಕೊಂಡಿರುವ ಬಗ್ಗೆ ನೋಡಿರುವುದಿಲ್ಲ. ನಾನು ನ್ಯಾಯಾಲಯಕ್ಕೆ ದಾಖಲಾತಿಗಳನ್ನು ಹಾಜರುಪಡಿಸುವ ಸಂದರ್ಭದಲ್ಲಿ ರಾಜಶೇಖರ್ ಸಾಲ ಪಡೆದುಕೊಂಡಿರುವ ವಿಚಾರ ನಾನು ಕೇಳಲಿಲ್ಲ. ನಿಪಿ.5 ರಲ್ಲಿ ರಾಜಶೇಖರ್ ರವರು ಗೆಜ್ಜಲಗೆರೆ ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘದಲ್ಲಿ ಸಾಲ ಪಡೆದುಕೊಂಡಿರುವ ಬಗ್ಗೆ ನಮೂದಾಗಿದೆ ಎಂದರೆ ಸಾಕ್ಷಿ ನನಗೆ ಗೊತ್ತಿಲ್ಲ ಎಂದು ಉತ್ತರಿಸುತ್ತಾರೆ. ನಾರಾಯಣ ಸಹಾ ಗೆಜ್ಜಲಗೆರೆ ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘದಲ್ಲಿ ಸಾಲ ಪಡೆದುಕೊಂಡಿದ್ದಾರೆ ಎಂದರೆ ನನಗೆ ಗೆತ್ತಿಲ್ಲ. ನಿಪಿ.6 ರಲ್ಲಿ ಸದರಿ ಅಂಶ ನಮೂದಾಗಿದೆ ಎಂದರೆ ನನಗೆ ಗೊತ್ತಿಲ್ಲ. ನಿಪಿ.7 ರಲ್ಲಿಯೂ ಸಹಾ ನಾರಾಯಣ ಸಾಲ ತೆಗೆದುಕೊಂಡಿರುವ ಬಗ್ಗೆ ನಮೂದಾಗಿದೆ ಎಂದರೆ ನನಗೆ ಗೊತ್ತಿಲ್ಲ. ನಿಪಿ.8 ರಲ್ಲಿ ನಾರಾಯಣ ಕಾಡೇಗೌಡರ ಮಗ ಈರಪ್ಪನಿಗೆ ಜಮೀನು ಬೋಗ್ಯ ಮಾಡಿರುವ ಬಗ್ಗೆ ನಮೂದಿದೆ ಎಂದರೆ ಸಾಕ್ಷಿ ಅದು ನನಗೆ ಗೊತ್ತಿಲ್ಲ ಎಂದು ಉತ್ತರಿಸುತ್ತಾರೆ. ನಾರಾಯಣ, ರಾಜಶೇಖರ ಮತ್ತು ನಾಗರಾಜು 3 ಜನ ನಿಮ್ಮ ಜೊತೆ ಚೆನ್ನಾಗಿದ್ದಾರೆ ಎಂದರೆ ಸಾಕ್ಷಿ ನಾಗರಾಜುರವರ ಜೊತೆ ಚೆನ್ನಾಗಿದ್ದೇನೆ, ನಾರಾಯಣ ಮತ್ತು ರಾಜಶೇಖರರವರ ಜೊತೆ ಚೆನ್ನಾಗಿಲ್ಲ ಎಂದು ಉತ್ತರಿಸುತ್ತಾರೆ.

ನಿಪಿ2 ರಲ್ಲಿ ನಮೂದಿರುವ ಜಮೀನು ಯಾವ ಆಧಾರದ ಮೇಲೆ 4 ನೇ ವಾದಿ ಹೆಸರಿಗೆ ವರ್ಗಾವಣೆ ಆಗಿದೆ ಎಂದು ತಿಳಿದುಕೊಂಡಿದ್ದೀರಾ ಎಂದರೆ ಸಾಕ್ಷಿ ತಿಳಿದುಕೊಂಡಿಲ್ಲ ಎಂದು ಉತ್ತರಿಸುತ್ತಾರೆ. ನಿಪಿ.3 ರಲ್ಲಿ ನಮೂದಿರುವ ಜಮೀನು ಯಾವ ಆಧಾರದ ಮೇಲೆ 2 ನೇ ಪ್ರತಿವಾದಿ ಹೆಸರಿಗೆ ವರ್ಗಾವಣೆ ಆಗಿದೆ ಎಂದು ತಿಳಿದುಕೊಂಡಿದ್ದೀರಾ ಎಂದರೆ ಸಾಕ್ಷಿ ತಿಳಿದುಕೊಂಡಿಲ್ಲ ಎಂದು ಉತ್ತರಿಸುತ್ತಾರೆ. ಅದೇ ರೀತಿ ನಿಪಿ.4 ರಲ್ಲಿ ನಮೂದಿರುವ ಜಮೀನು ಯಾವ ಆಧಾರದ ಮೇಲೆ 2 ನೇ ಪ್ರತಿವಾದಿ ಹೆಸರಿಗೆ ವರ್ಗಾವಣೆ ಆಗಿದೆ ಎಂದು ತಿಳಿದುಕೊಂಡಿದ್ದೀರಾ ಎಂದರೆ ಸಾಕ್ಷಿ ತಿಳಿದುಕೊಂಡಿಲ್ಲ ಎಂದು ಉತ್ತರಿಸುತ್ತಾರೆ. ಅದೇ ರೀತಿ ನಿಪಿ.5 ರಲ್ಲಿರುವ ಜಮೀನು ಯಾವ ಆಧಾರದ ಮೇಲೆ 1 ನೇ ಪ್ರತಿವಾದಿ ಹೆಸರಿಗೆ ವರ್ಗಾವಣೆ ಆಗಿದೆ ಎಂದು ತಿಳಿದುಕೊಂಡಿದ್ದೀರಾ ಎಂದರೆ ಸಾಕ್ಷಿ ತಿಳಿದುಕೊಂಡಿಲ್ಲ ಎಂದು ಉತ್ತರಿಸುತ್ತಾರೆ. ನಿಪಿ.6 ಯಾವ ಆಧಾರದ ಮೇಲೆ 2 ನೇ ಪ್ರತಿವಾದಿ ಹೆಸರಿಗೆ ವರ್ಗಾವಣೆ ಆಗಿದೆ ಎಂದು ತಿಳಿದುಕೊಂಡಿದ್ದೀರಾ ಎಂದರೆ ಸಾಕ್ಷಿ ತಿಳಿದುಕೊಂಡಿಲ್ಲ ಎಂದು ಉತ್ತರಿಸುತ್ತಾರೆ. ನಿಪಿ.7 ಯಾವ ಆಧಾರದ ಮೇಲೆ 2 ನೇ ಪ್ರತಿವಾದಿ ಹೆಸರಿಗೆ ವರ್ಗಾವಣೆ ಆಗಿದೆ ಎಂದು ತಿಳಿದುಕೊಂಡಿದ್ದೀರಾ ಎಂದರೆ ಸಾಕ್ಷಿ ತಿಳಿದುಕೊಂಡಿಲ್ಲ ಎಂದು ಉತ್ತರಿಸುತ್ತಾರೆ. ನಿಪಿ.8 ಯಾವ ಆಧಾರದ ಮೇಲೆ

2 ನೇ ಪ್ರತಿವಾದಿ ಹೆಸರಿಗೆ ವರ್ಗಾವಣೆ ಆಗಿದೆ ಎಂದು ತಿಳಿದುಕೊಂಡಿದ್ದೀರಾ ಎಂದರೆ ಸಾಕ್ಷಿ ತಿಳಿದುಕೊಂಡಿಲ್ಲ ಎಂದು ಉತ್ತರಿಸುತ್ತಾರೆ.

ನಿಪಿ.10 ರಲ್ಲಿ ನಮೂದಿರುವ ಎಲ್ಲಾ ಆಸ್ತಿಗಳನ್ನು ಈ ದಾವೆಯಲ್ಲಿ ಸೇರಿಸಿದ್ದೀರಾ ಎಂದರೆ ಸಾಕ್ಷಿ ಸೇರಿಸಿದ್ದೇನೆ ಎಂದು ಉತ್ತರಿಸುತ್ತಾರೆ. ಸರ್ವೆ ನಂ.106/5 ರಲ್ಲಿ 19 ಗುಂಟೆ ರಾಜಶೇಖರ್ ರವರ ಹೆಸರಿನಲ್ಲಿರುವ ಜಮೀನನ್ನು ಈ ದಾವೆಯಲ್ಲಿ ಸೇರಿಸಿದ್ದೀರಾ ಎಂದರೆ ಸಾಕ್ಷಿ ಸೇರಿಸಿದ್ದೇನೆ ಎಂದು ಉತ್ತರಿಸುತ್ತಾರೆ. ಮೇಲೆ ಹೇಳಿದ ಸರ್ವೆ ನಂ.106/5 ರಲ್ಲಿ 19 ಗುಂಟೆ ಜಮೀನನ್ನು ನೀವು ಈ ದಾವೆಯಲ್ಲಿ ಸೇರಿಸಿಲ್ಲ ಎಂದರೆ ಸಾಕ್ಷಿ ನಮ್ಮ ತಂದೆಯ ಎಲ್ಲಾ ಆಸ್ತಿಗಳನ್ನು ಸೇರಿಸಿದ್ದೇನೆ ಎಂದು ಉತ್ತರಿಸುತ್ತಾರೆ. ಸರ್ವೆ ನಂ.96/4 ರಲ್ಲಿ 19 ಗುಂಟೆ ಜಮೀನು 4 ನೇ ವಾದಿಯ ಹೆಸರಿನಲ್ಲಿ ಇರುವುದನ್ನು ಈ ದಾವೆಯಲ್ಲಿ ಸೇರಿಸಿಲ್ಲ ಎಂದರೆ ಸಾಕ್ಷಿ ಸೇರಿಸಿಲ್ಲ ಎಂದರೆ ಸಾಕ್ಷಿ ಸೇರಿಸಿದ್ದಾರೋ ಇಲ್ಲವೋ ನನಗೆ ಗೊತ್ತಿಲ್ಲ ಎಂದು ಉತ್ತರಿಸುತ್ತಾರೆ. ಸರ್ವೆ ನಂ.96/4 ರಲ್ಲಿ 6 ಗುಂಟೆ ಜಮೀನು 4 ನೇ ವಾದಿಯ ಹೆಸರಿನಲ್ಲಿ ಇರುವುದನ್ನು ಈ ದಾವೆಯಲ್ಲಿ ಸೇರಿಸಿಲ್ಲ ಎಂದರೆ ಸಾಕ್ಷಿ ಸೇರಿಸಿಲ್ಲ ಎಂದರೆ ಸಾಕ್ಷಿ ಸೇರಿಸಿದ್ದಾರೋ ಇಲ್ಲವೋ ನನಗೆ ಗೊತ್ತಿಲ್ಲ ಎಂದು ಉತ್ತರಿಸುತ್ತಾರೆ. ಸರ್ವೆ ನಂ.268/1ಎ ರಲ್ಲಿ 11 ಗುಂಟೆ ಜಮೀನು ನಾಗರಾಜು ಹೆಸರಿನಲ್ಲಿರುವ ಜಮೀನನ್ನು ಈ ದಾವೆಯಲ್ಲಿ ಸೇರಿಸಿಲ್ಲ ಎಂದರೆ ಸಾಕ್ಷಿ ಈ ಜಮೀನು ನನಗೆ ಗೊತ್ತಿಲ್ಲ ಎಂದು ಉತ್ತರಿಸುತ್ತಾರೆ. ಸರ್ವೆ ನಂ.87/1 ರಲ್ಲಿ ಇರುವ 1 ಗುಂಟೆ ನಾರಾಯಣರವರ ಹೆಸರಿನಲ್ಲಿ ಇರುವ ಜಮೀನನ್ನು ನೀವು ಈ ದಾವೆಯಲ್ಲಿ ಸೇರಿಸಿಲ್ಲ ಎಂದರೆ ಸಾಕ್ಷಿ ಸೇರಿಸಿದ್ದೇನೆ ಎಂದು ಉತ್ತರಿಸುತ್ತಾರೆ. ಮೇಲೆ ಹೇಳಿದ 1 ಗಂಟೆ ಜಮೀನನ್ನು ದಾವೆಯಲ್ಲಿ ಸೇರಿಸಿಲ್ಲ ಎಂದರೆ ಸಾಕ್ಷಿ ನಮ್ಮ ತಂದೆಯ ಆಸ್ತಿಯ ಬಗ್ಗೆ ನಾವು ಹಾಕಿಲ್ಲ, ನಮ್ಮ ತಾಯಿ ಹೆಸರಿನಲ್ಲಿ ಇದ್ದ ಜಮೀನಿಗೆ ಈ ಕೇಸ್ ಹಾಕಿದ್ದೇವೆ ಎಂದು ಉತ್ತರಿಸುತ್ತಾರೆ. ಸರ್ವೆ ನಂ.87/4 ರಲ್ಲಿ 12 ಮುಕ್ಕಾಲು ಗುಂಟೆ ಜಮೀನನ್ನು ನೀವು ಈ ದಾವೆಯಲ್ಲಿ ಸೇರಿಸಿಲ್ಲ ಎಂದರೆ ಸಾಕ್ಷಿ ಸೇರಿ ನನಗೆ ಗೊತ್ತಿಲ್ಲ ಎಂದು ಉತ್ತರಿಸುತ್ತಾರೆ. ಸರ್ವೆ ನಂ.264/4 ರಲ್ಲಿ 14 ಮುಕ್ಕಾಲು ಗುಂಟೆ 2 ನೇ ಪ್ರತಿವಾದಿ ಹೆಸರಿನಲ್ಲಿ ಇರುವ ಜಮಿನನ್ನು ಈ ದಾವೆಯಲ್ಲಿ ಸೇರಿಸಿಲ್ಲ ಎಂದರೆ ಸಾಕ್ಷಿ ಸೇರಿಸಿಲ್ಲ ಎಂದು ಉತ್ತರಿಸುತ್ತಾರೆ. ಈ ಮೇಲೆ ಹೇಳಿದ ಜವಿಮೀನುಗಳ ಆರ್.ಟಿ.ಸಿ ಗಳನ್ನು ರಾಜಶೇಖರ ಆಗಲಿ ನಾರಾಯಣ್ ಆಗಲಿ ನಿಮಗೆ ಕೊಟ್ಟರಾ ಎಂದರೆ ಸಾಕ್ಷಿ ಇಲ್ಲ ಎಂದು ಉತ್ತರಿಸುತ್ತಾರೆ. ಈ ದಾವೆಯನ್ನು ನಾವೇ ಹಾಕಿದ್ದೇವೆ. ಅಂದರೆ ನಾನು ಮತ್ತು ತಇರೆ ವಾದಿಯರು ಸೇರಿ ಹಾಕಿರುತ್ತೇವೆ.

ದಾವಾ ಹಾಕುವ ಕಾಲಕ್ಕೆ ನಾಗರಾಜುರವರು ಅವರ ಹೆಸರಿನಲ್ಲಿ ಇರುವ ಜಮೀನುಗಳ ಆರ್.ಟಿ.ಸಿ ಯನ್ನು ನಿಮಗೆ ಕೊಟ್ಟರಾ ಎಂದರೆ ಸಾಕ್ಷಿ ಖಾತಾ ಆಗಿರುವುದೇ ನನಗೆ ಗೊತ್ತಿಲ್ಲ

ಎಂದು ಉತ್ತರಿಸುತ್ತಾರೆ. ನೀವು ದಾವಾ ಹಾಕುವ ಕಾಲಕ್ಕೆ ನಾಗರಾಜುರವರು ತಮ್ಮ ಹೆಸರಿನಲ್ಲಿ ಕೆಲವು ಆರ್.ಟಿ.ಸಿ, ಗಳು ಬರುತ್ತಿವೆ ಎಂದು ನಿಮಗೆ ಹೇಳಿದ್ದರಾ ಎಂದರೆ ಸಾಕ್ಷಿ ಹೇಳಿದ್ದರು ಎಂದು ಉತ್ತರಿಸುತ್ತಾರೆ. ಎಷ್ಟು ಸರ್ವೆ ನಂಬರ್ ಜಮೀನುಗಳ ಆರ್.ಟಿ.ಸಿ ಅವರ ಹೆಸರಿನಲ್ಲಿ ಬರುತ್ತಿವೆ ಎಂದು ಹೇಳಿದ್ದರಾ ಎಂದರೆ ಸಾಕ್ಷಿ ಅದನ್ನು ಹೇಳಿರಲಿಲ್ಲ ಎಂದು ಉತ್ತರಿಸುತ್ತಾರೆ. ಬಲ್ಲೇಗೌಡರಿಗೆ ಎಷ್ಟು ರೂಪಾಯಿಗೆ ಕ್ರಯದ ಕರಾರು ಮಾಡಿದ್ದರು ಎಂದು ಹೇಳಿದರಾ ಎಂದರೆ ಸಾಕ್ಷಿ ಹೇಳಿರಲಿಲ್ಲ ಎಂದು ಉತ್ತರಿಸುತ್ತಾರೆ. ಬಲ್ಲೇಗೌಡರಿಗೆ ಕ್ರಯದ ಕರಾರು ಮಾಡಿರುವ ವಿಚರ ನಿಮಗೆ ಯಾವಾಗ ತಿಳಿಯಿತು ಎಂದರೆ ಸಾಕ್ಷಿ ನಮ್ಮ ತಾಯಿಯ ಆಸ್ತಿಯನ್ನು ಭಾಗ ಕೇಳಲು ಹೋಗಿದ್ದಾಗ ಊರಿನವರಿಂದ ವಿಚಾರ ತಿಳಿಯಿತು, ಆಗ ಆರ್.ಟಿ.ಸಿ. ತೆಗೆಸಿ ನೋಡಿರುತ್ತೇವೆ. ಯಾವ ವರ್ಷ ಕರಾರು ಮಾಡಿರುವ ವಿಚಾರ ನಿಮಗೆ ಗೊತ್ತಾಯಿತು ಎಂದರೆ ಸಾಕ್ಷಿ ವರ್ಷ ನನಗೆ ಗೊತ್ತಿಲ್ಲ ಇಲ್ಲಿಗೆ 7 ವರ್ಷಗಳ ಹಿಂದೆ ಗೊತ್ತಾಯಿತು ಎಂದು ಉತ್ತರಿಸುತ್ತಾರೆ. ಯಾವ ಸರ್ವೆ ನಂಬರ್ ಜಮೀನಿನಲ್ಲಿ ಎಷ್ಟು ಗುಂಟೆ ಬಲೇಗೌಡರಿಂದ ಕರಾರ ಮಾಡಿದ್ದಾರೆ ಎಂದು ತಿಳಿದುಕೊಂಡಿದ್ದೀರಾ ಎಂದರೆ ಸಾಕ್ಷಿ ಇಲ್ಲ ಎಂದು ಉತ್ತರಿಸುತ್ತಾರೆ. ಈ ದಾವಾ ಹಾಕುವ ಸಮಯದಲ್ಲಿ ನಾರಾಯಣ ಯಾವ ಯಾವ ಸರ್ವೆ ನಂಬರ್ ಜಮೀನುಗಳನ್ನು ಎಷ್ಟು ಗುಂಟೆ ಜಮೀನನ್ನು ಬಲ್ಲೇಗೌಡರಿಗೆ ಕರಾರು ಮಾಡಿಕೊಟ್ಟಿದ್ದಾರೆ ಎಂದರೆ ಹೇಳಿದರಾ ಎಂದರೆ ಸಾಕ್ಷಿ ಹೇಳಿಲ್ಲ ಎಂದು ಉತ್ತರಿಸುತ್ತಾರೆ. 2 ನೇ ಪ್ರತಿವಾದಿ ಬಲ್ಲೇಗೌಡರ ಹೆಸರಿಗೆ ಯಾವ ದಿನಾಂಕಗಳಲ್ಲಿ ಕ್ರಯದ ಕರಾರು ಮಾಡಿದ್ದಾರೆ ಎಂದು ನಿಮ್ಮ ದಾವಾ ಪತ್ರದಲ್ಲಿ ಆಗಲಿ ಪ್ರಮಾಣ ಪತ್ರದಲ್ಲಿ ಆಗಲಿ ಹೇಳಿಲ್ಲ ಎಂದರೆ ಸಾಕ್ಷಿ ಇಲ್ಲ ಎಂದು ಉತ್ತರಿಸುತ್ತಾರೆ. ನೀವು ಈ ಕೇಸ್ ಅಲ್ಲದೆ ಬೇರೆ ಯಾವುದಾದರೂ ಕೇಸ್ ನಲ್ಲಿ ಅರ್ಜಿದಾರರಾಗಿ ಅರ್ಜಿ ಸಲ್ಲಿಸಿಲ್ಲ ಎಂದರೆ ಸಾಕ್ಷಿ ಹಾಕಿದ್ದೇನೆ ಎಂದು ಉತ್ತರಿಸುತ್ತಾರೆ. ಆ ಕೇಸ್ ನಂಬರ್ ಯಾವುದು ಎಂದರೆ ಸಾಕ್ಷಿ ಅದು ನನಗೆ ಗೊತ್ತಿಲ್ಲ, ನನ್ನ ಅಕ್ಕ ಕೇಸ್ ಹಾಕಿದ್ದು ಆಕೆ ತೀರಿಕೊಂಡ ನಂತರ ನಾನು ಅರ್ಜಿ ಹಾಕಿದ್ದೇನೆ ಎಂದು ಉತ್ತರಿಸುತ್ತಾರೆ.

ಬಲ್ಲೇಗೌಡರಿಗೆ ಕ್ರಯ ಪತ್ರ ಆಗಿದೆಯೋ ಇಲ್ಲವೋ ಎಂಬುದನ್ನು ನಾನು ಕೇಳಿ ತಿಳಿದುಕೊಂಡಿರುವುದಿಲ್ಲ. ನ್ಯಾಯಾ ಪಂಚಾಯಿತಿಗೆ ಸೇರಿದ ದಿನಾಂಕ ನೆನಪಿಲ್ಲ, ಆದರೆ 7 ವರ್ಷಗಳ ಹಿಂದೆ ಸೇರಿದ್ದೆವು. ಯಾವ ದಿನಾಂಕ ಮತ್ತು ತಿಂಗಳಿನಲ್ಲಿ ಭಾಗ ಕೇಳಿದ್ದೇವೆ ಎಂದು ವಾದ ಪತ್ರದಲ್ಲಿ ಹೇಳಿರುವುದಿಲ್ಲ, ಆದರೆ ವರ್ಷಗಳ ಹಿಂದೆ ಭಾಗ ಕೇಳಿದ್ದೇವೆ. ಬಲ್ಲೇಗೌಡ ನಾರಾಯಣ ರವರ ವಿರುದ್ದ ಯಾವ ನ್ಯಾಯಾಲಯದಲ್ಲಿ ಕೇಸ್ ಹಾಕಿದ್ದಾರೆ ಎಂದು ಕೇಚಿ ತಿಳಿದುಕೊಂಡಿದ್ದೀರಾ ಎಂದರೆ ಸಾಕ್ಷಿ ತಿಳಿದುಕೊಂಡಿಲ್ಲ ಎಂದು ಉತ್ತರಿಸುತ್ತಾರೆ. ನಾರಾಯಣರವರ ವಿರುದ್ದ ಬಲ್ಲೇಗೌಡರವರು ಇದೇ ನ್ಯಾಯಾಲಯದಲ್ಲಿ ದಾವಾ ಸಲ್ಲಿಸಿ ನಂತರ ಜನತಾ ನ್ಯಾಯಾಲಯದಲ್ಲಿ ದಾವೆಯನ್ನು ರಾಜಿ ಮಾಡಿಕೊಂಡಿದ್ದಾರೆ ಎಂದರೆ ಸಾಕ್ಷಿ ರಾಜಿ

ಮಾಡಿಕೊಂಡಿಲ್ಲ ಎಂದು ಉತ್ತರಿಸುತ್ತಾರೆ. ಸದರಿ ರಾಜಿ ಡಿಕ್ರಿಯ ಪ್ರಕಾರ ನಾರಾಯಣ ಕ್ರಯ ಪತ್ರ ಬರೆದುಕೊಡದ ಕಾರಣ ಬಲ್ಲೇಗೌಡರವರು ಜಾರಿ ಪ್ರಕರಣ ದಾಖಲಿಸಿ ನ್ಯಾಯಾಲಯದ ಆಯುಕ್ತರ ಮೂಲಕ ಕ್ರಯ ಪತ್ರ ನೊಂದಣಿ ಮಾಡಿಸಿಕೊಂಡಿದ್ದಾರೆ ಎಂದರೆ ಸಾಕ್ಷಿ ನಮ್ಮ ತಾಯಿಯ ಆಸ್ತಿಯನ್ನು ನಮ್ಮ ಸಹಿ ಇಲ್ಲದೆ ಹೇಗೆ ಮಾರುತ್ತಾರೆ ಎಂದು ಉತ್ತರಿಸುತ್ತಾರೆ.

ಬಲ್ಲೇಗೌಡರವರು ನಾರಾಯಣರವರ ಮೇಲೆ ದಾಖಲಿಸಿದ್ದ ಅಸಲು ದಾವಾ 39/2013 ಎಂದರೆ ಸಾಕ್ಷಿ ಅದಕ್ಕೆ ನಾವು ಕೇಸ್ ಹಾಕಿರುವುದು ಎಂದು ಉತ್ತರಿಸುತ್ತಾರೆ. ಬಲ್ಲೇಗೌಡರ ಹೆಸರಿಗೆ ಕ್ರಯ ಪತ್ರ ಸಹಾ ಆಗಿದೆ ಎಂದರೆ ಸಾಕ್ಷಿ ನಮ್ಮ ಸಹಿ ಇಲ್ಲದೆ ಹೇಗೆ ಆಗುತ್ತದೆ ಎಂದು ಉತ್ತರಿಸುತ್ತಾರೆ. ನಾರಾಯಣ ಬಹಳ ಸಾಲ ಮಾಡಿಕೊಂಡಿದ್ದ, ಅದನ್ನು ತೀರಿಸಿಕೊಳ್ಳುವ ಸಲುವಾಗಿ ಬಲ್ಲೇಗೌಡರಿಗೆ ಜಮೀನನ್ನು ಮಾರಾಟ ಮಾಡಿದ್ದು ಎಂದರೆ ಸಾಕ್ಷಿ ಇಲ್ಲ ಎಂದು ಉತ್ತರಿಸುತ್ತಾರೆ. ನಾರಾಯಣ ಮಾಡಿದ ಸಾಲ ತೀರಿಸಲು ದಾವಾ ಐಟಂ ನಂ.3 ಮತ್ತು 6 ಜಮೀನನ್ನು ಬಲ್ಲೇಗೌಡರಿಗೆ ಮಾರಾಟ ಮಾಡಲು ರೂ.12,50,000/- ಕರಾರು ಪತ್ರ ಮಾಡಿಕೊಟ್ಟಿದ್ದು ಆ ಬಾಬ್ತು ರೂ.5,00,000/- ಮುಂಗಡ ಹಣ ಪಡೆದಿದ್ದರು ಎಂದರೆ ಸಾಕ್ಷಿ ಇಲ್ಲ ಎಂದು ಉತ್ತರಿಸುತ್ತಾರೆ. ಉಳಿಕೆ ರೂ.7,50,000/- ಗಳನ್ನು ಕ್ರಯ ಪತ್ರ ನೊಂದಣಿ ಸಮಯದಲ್ಲಿ ಪಡೆದು ಕ್ರಯ ಪತ್ರ ನೊಂದಾಯಿಸಿ ಕೊಡುವುದಾಗಿ ನಾರಾಯಣ ಒಪ್ಪಿ ಕ್ರಯದ ಕರಾರು ಪತ್ರವನ್ನು ನೊಂದಣಿ ಮಾಡಿಸಿ ಕೊಟ್ಟಿದ್ದರು ಎಂದರೆ ಸಾಕ್ಷಿ ಇಲ್ಲ ಎಂದು ಉತ್ತರಿಸುತ್ತಾರೆ. 1 ನೇ ಪ್ರತಿವಾದಿ, 2 ನೇ ಪ್ರತಿವಾದಿ ಮತ್ತು 4 ನೇ ವಾದಿ ಈಗಾಗಲೇ ಭಾಗವಾಗಿ ಅವರವರ ಭಾಗದಲ್ಲಿ ಪ್ರತ್ಯೇಕವಾಗಿ ಸ್ವಾಧೀನ ಮಾಡಿಕೊಂಡು ಬರುತ್ತಿದ್ದಾರೆ ಎಂದರೆ ಸಾಕ್ಷಿ ಇಲ್ಲ ಎಂದು ಉತ್ತರಿಸುತ್ತಾರೆ. ನಮ್ಮ ತಂದೆ ತೀರಿಕೊಂಡ ನಂತರ 1 ಪ್ರತಿವಾದಿ ಕುಟುಂಬದ ವ್ಯವಹಾರ ಮಾಡುತ್ತಿದುದ, 2 ನೇ ಪ್ರತಿವಾದಿ ಮತ್ತು ವಾದಿಯರು ಒಟ್ಟು ಕುಟುಂಬದಲ್ಲಿ ವಾಸವಾಗಿದ್ದೆವು ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. 1 ಮತ್ತು 2 ನೇ ಪ್ರತಿವಾದಿ ಶರೀಕಾಗಿ ಅವರೇ ಖಾತಾ ವರ್ಗಾವಣೆ ಮಾಡಿಸಿದ್ದಾರೆ ಎಂದು ಸುಳ್ಳು ಹೇಳಿದ್ದೇನೆ ಎಂದರೆ ಸರಿಯಲ್ಲ. 1 ಮತ್ತು 2 ನೇಪ್ರತಿವಾದಿ ಒಟ್ಟು ಕುಟುಂಬದ ಆದಾ ಯವನ್ನು ತಮ್ಮ ಇಚ್ಛಾನುಸಾರ ದುರುಪಯೋಗ ಪಡಿಸಿಕೊಳ್ಳುತ್ತಿದ್ದರು ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಒಟ್ಟು ಕುಟುಂಬದ ಆದಾಯ ಮತ್ತು ಲೆಕ್ಕ ಪತ್ರಗಳನ್ನು ನಮಗೆ ತಿಳಿಸುತ್ತಿದ್ದರು ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಒಟ್ಟು ಕುಟುಂಬದ ಜಮೀನಿನಲ್ಲಿ ಒಳ್ಳೆಯ ಆದಾಯ ಬರುತ್ತಿದೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನಾರಾಯಣ ಹೆಚ್ಚು ಸಾಲ ಮಾಡಿಕೊಂಡಿದ್ದರಿಂದ ದಾವಾ ಐಟಂ ನಂ. 3 ಮತ್ತು 6 ಅನ್ನು ಮಾರಾಟ ಮಾಡುವುದಾಗಿ ಊರಿನಲ್ಲಿ ಪ್ರಚುರ ಪಡಿಸಿದ್ದ ಎಂದರೆ ಸಾಕ್ಷಿ ಇಲ್ಲ ಎಂದು ಉತ್ತರಿಸುತ್ತಾರೆ

ದಾವಾ ಐಟಂ ನಂ. 3 ಮತ್ತು 6 ನೇ ಸ್ವತ್ತು 2 ನೇ ಪ್ರತಿವಾದಿ ನಾರಾಯಣ ರವರ ಹೆಸರಿನಲ್ಲಿಯೇ ಇದ್ದು, ಆ ಸ್ವತ್ತುಗಳನ್ನು ಬಲ್ಲೇಗೌಡರಿಗೆ ಮಾರಾಟ ಮಾಡಲು ಒಪ್ಪಿ ಕ್ರಯದ ಕರಾರು ಮಾಡಿಕೊಟ್ಟಿದ್ದು ಎಂದರೆ ಸಾಕ್ಷಿ ಇಲ್ಲ ಎಂದು ಉತ್ತರಿಸುತ್ತಾರೆ. ಮಹಿಳೆಯರ ಕಿತ್ತಾಟದ ಕಾರಣ ಪ್ರತ್ಯೇಕವಾಗಿ ವಾಸವಾಗಿದ್ದು ಕುಟುಂಬದ ಆಸ್ತಿಗಳಲ್ಲಿ ಯಾವುದೇ ಭಾಗ ಆಗಿಲ್ಲ ಎಂದು ಸುಳ್ಳು ಹೇಳಿದ್ದೇನೆ ಎಂದರೆ ಸರಿಯಲ್ಲ. ರಾಜಶೇಖರ ಕುಟುಂಬದ ಎಲ್ಲಾ ಸ್ವತ್ತುಗಳನ್ನು ಕುಟುಂಬದ ಪರವಾಗಿ ನೋಡಿಕೊಳ್ಳುತ್ತಿದ್ದಾರೆ ಎಂದು ಸುಳ್ಳು ಹೇಳಿದ್ದೇನೆ ಎಂದರೆ ಸರಿಯಲ್ಲ. ದಾವಾ ಸ್ವತ್ತುಗಳಲ್ಲಿ 7/1 ಭಾಗ ಕೇಳಿರುತ್ತೇನೆ ಎಂದು 7 ನೇ ಪ್ರತಿವಾದಿಗೆ ತೊಂದರೆ ಕೊಡುವ ಉದ್ದೇಶದಿಂದ ಕೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಪಂಚಾಯಿತಿ ಸೇರಿಸಿದ್ದೆವು ಎಂದು ಸುಳ್ಳು ಹೇಳಿರುತ್ತೇನೆ ಎಂದರೆ ಸರಿಯಲ್ಲ. 2 ನೇಪ್ರತಿವಾದಿ 7 ನೆ ಪ್ರತಿವಾದಿಗೆ ಮಾಡಿಕೊಟ್ಟಿರುವ ಕ್ರಯದ ಕರಾರನ್ನು ನಾನು ನೋಡಿಲ್ಲ. ಆ ಕ್ರಯದ ಕರಾರನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿದ್ದೇನೆ.

ಶಾರದರವರು ನ್ಯಾಯಾಲಯಕ್ಕೆ ಸಲ್ಲಿಸಿರುವ ಪ್ರಮಾಣ ಪತ್ರದ ಅಂಶಗಳ ಬಗ್ಗೆ ತಿಳಿದುಕೊಂಡಿದ್ದೀರಾ ಎಂದರೆ ಸಾಕ್ಷಿ ಇಲ್ಲ ಎಂದು ಉತ್ತರಿಸುತ್ತಾರೆ. ನನ್ನ ಪ್ರಮಾಣ ಪತ್ರವನ್ನು ನಾನೇ ಮಾಹಿತಿ ಕೊಟ್ಟು ಬರೆಸಿದ್ದೇನೆ. 2 ನೇ ಪ್ರತಿವಾದಿ 7 ನೇ ಪ್ರತಿವಾದಿಗೆ ಮಾಡಿಕೊಟ್ಟಿರುವ ಕ್ರಯದ ಕರಾರಿನ ಬಗ್ಗೆ ನಿಮಗೆ ಗೊತ್ತು ಹಾಗೆಯೇ ಅವರಿಗೆ ಆಗಿರುವ ಕ್ರಯ ಪತ್ರದ ಬಗ್ಗೆಯೂ ನಿಮಗೆ ಗೊತ್ತು ಆದರೂ ಅವರಿಗೆ ತೊಂದರೆ ಕೊಡುವ ಉದ್ದೇಶದಿಂದ ಈ ಸುಳ್ಳು ಕೇಸ್ ಹಾಕಿದ್ದೀರಿ ಎಂದರೆ ಸಾಕ್ಷಿ ಸರಿಯಲ್ಲ ಎಂದು ಉತ್ತರಿಸುತ್ತಾರೆ.

**ಮರು ವಿಚಾರಣೆ ಇಲ್ಲ.**

ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು.

ಓ.ಹೇ.ಕೇ ಸರಿ ಇದೆ

ಹಿರಿಯ ಸಿವಿಲ್ ನ್ಯಾಯಾಧೀಶರು
ಮದ್ದೂರು.